
# ಸ್ವಾಮಿ ಜಗದಾತ್ಮಾನಂದಜಿಯವರ ‘ಬದುಕಲು ಕಲಿಯಿರಿ’

**ಡಾ. ಹೆಚ್. ಪಾಂಡುರಂಗ ವಿಠಲ**

ಕನ್ನಡ ಗ್ರಂಥ ಪ್ರಕಾಶನದ ಇತಿಹಾಸದಲ್ಲಿ ‘ಬದುಕಲು ಕಲಿಯಿರಿ’ ಕೃತಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅತ್ಯಂತ ಜನಪ್ರಿಯವೂ, ಪ್ರಭಾವ ಶಾಲಿಯೂ, ಯುವಜನತೆಗೆ ಸ್ಫೂರ್ತಿ, ಪ್ರೇರಣೆ ನೀಡಬಲ್ಲ ಗ್ರಂಥವೂ ಆಗಿರುವ ಈ ಕೃತಿಯ ಆಂತರ್ಯದಲ್ಲಿ ಸ್ವಾಮಿ ವಿವೇಕಾನಂದರ ಭಾವಸ್ಫುರಣೆ ನಡೆಯುತ್ತಿರುತ್ತದೆ. ಈ ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.




**ಬಾ**ಳೆಕುದ್ರುವಿನ ತರುಣ ಲಕ್ಷ್ಮೀನಾರಾಯಣ ಕೆದಿಲಾಯರು (ಮುಂದೆ ಸ್ವಾಮಿ ಜಗದಾತ್ಮಾನಂದಜಿ) ‘ಶ್ರೀತನಯ’ ಎಂಬ ಕಾವ್ಯನಾಮದಲ್ಲಿ ರಚಿಸಿದ **‘ಬದುಕಲು ಕಲಿಯಿರಿ’**ಯನ್ನು ಮಣಿಪಾಲದ ಗ್ರಾಮಸೇವಾ ಟ್ರಸ್ಟ್ ಮೊದಲು ಪ್ರಕಟಿಸಿದ್ದು ೧೯೬೧ರಲ್ಲಿ. ಕ್ರೌನ್ ಅಷ್ಟಪತ್ರ ಆಕಾರದ ೧೩೦ ಪುಟಗಳ ಈ ಮೊದಲ ಮುದ್ರಣಕ್ಕೆ ಬೆಲೆ ರೂ. ೧.೫೦/= ಮಾತ್ರ. (ನನ್ನ ಹತ್ತಿರ ಇರುವ ೧೭ನೆ ಮುದ್ರಣದ ಸಂಯುಕ್ತ ಆವೃತ್ತಿ ಡೆಮಿ ಆಕಾರದ ೪೮೦ ಪುಟಗಳದ್ದು, ಬೆಲೆ ರೂ. ೧೫೦.೦೦/-). ಮೊದಲ ಮುದ್ರಣದಲ್ಲಿ ಇದ್ದ ಅಧ್ಯಾಯಗಳು ನಾಲ್ಕು ಮಾತ್ರ: ೧. ರಹಸ್ಯವೇನು (೩೦ ಪುಟ), ೨. ಚಿಂತೆಯನ್ನು ದೂರಕ್ಕೆಸೆಯಿರಿ (೪೪ ಪುಟ), ೩. ನಿಮ್ಮ ಆರೋಗ್ಯ ಮತ್ತು ಸೌಂದರ್ಯ (೨೯ ಪುಟ), ೪. ಜನರೊಂದಿಗೆ (೨೬ ಪುಟ). ಸ್ವಾಮೀಜಿ ಅವರ ಮನಸ್ಸಿನಲ್ಲೆ ಬೆಳೆಯುತ್ತ ಬಂದ ಈ ವಸ್ತು ೧೯೮೧ರಲ್ಲಿ ಇದೇ ಹೆಸರಿನಲ್ಲಿ ಮೊದಲ ಭಾಗವಾಗಿ, ೧೯೮೬ರಲ್ಲಿ ಎರಡನೆಯ ಭಾಗವಾಗಿ ಪ್ರಕಟವಾಯಿತು. ಕ್ರಮೇಣ ಮೂರು ಪರಿಷ್ಕೃತ ಸಂಯುಕ್ತ ಆವೃತ್ತಿಗಳೂ ಹೊರಬಂದವು. ಪ್ರತಿ ಮುದ್ರಣವನ್ನೂ ತಾವೇ ಪರಿಶೋಧಿಸಿ, ಕೊನೆ ಕ್ಷಣದವರೆಗೂ ಬದಲಾಯಿಸುತ್ತಿದ್ದುದು ಸ್ವಾಮೀಜಿಯವರ ವೈಶಿಷ್ಟ್ಯ. ಸ್ವಾಮೀಜಿಯವರು ತಮ್ಮ ಈ ಏಕೈಕ ಪುಸ್ತಕದಿಂದ ಪ್ರಸಿದ್ಧರು. ೧೯೬೩ರಲ್ಲಿ ಆರನೆ ತರಗತಿಯಲ್ಲಿದ್ದ ನಾನು ಇದರ ಮೊದಲ ಓದುಗರಲ್ಲಿ ಒಬ್ಬನಾಗಿದ್ದು, ಕ್ರಮೇಣ ಸ್ವಾಮೀಜಿಯವರ ಸಂಪರ್ಕಕ್ಕೂ ಬಂದೆ. ಈ ಪುಸ್ತಕದಿಂದ ಹಾಗೂ ಲೇಖಕರಿಂದ ಪ್ರೇರಣೆ ಪಡೆದುಕೊಂಡದ್ದು ನನ್ನ ಸುಕೃತ. ಈ ಪುಸ್ತಕದ ಮೂರು ಸಂಗ್ರಹಗಳಿದ್ದು, ಎರಡನ್ನು ನಾನು ಮಾಡಿದ್ದೆ. ಒಂದು ‘ಕಸ್ತೂರಿ’ಯಲ್ಲಿ, ಮತ್ತೊಂದು ‘ಬದುಕುವ ದಾರಿ’ ಎಂದು ಆಶ್ರಮದಿಂದ ಪ್ರಕಟವಾಗಿದೆ. ಇನ್ನೊಂದು ಹಿರಿಯ ಮಿತ್ರ ಡಾ. ‘ಜೀವಿ’ ಕುಲಕರ್ಣಿಯವರು ಮಾಡಿದ್ದು, ಮೊದಲು ಮುಂಬಯಿಯ ‘ಕರ್ನಾಟಕ ಮಲ್ಲ’ ಪತ್ರಿಕೆಯಲ್ಲಿ, ಅನಂತರ ಪುಸ್ತಕವಾಗಿ ಪ್ರಕಟವಾಗಿದೆ. ‘ಕಸ್ತೂರಿ’ಯಲ್ಲಿ ಸಂಗ್ರಹ ಪ್ರಕಟವಾದಾಗ, ಪರಿಚಯದಲ್ಲಿ ಸ್ವಾಮೀಜಿಯವರು ಕ್ಯಾನ್ಸರನ್ನು ಹಿಮ್ಮೆಟ್ಟಿಸಿ, ಪುನಃ ಪ್ರಬೋಧಕ ಭಾಷಣಗಳನ್ನು ನೀಡುತ್ತಿರುವ ಬಗ್ಗೆ ಬರೆದಾಗ, ಸಾವಿರಾರು ಓದುಗರಿಂದ ೨-೩ ದಿನ ತಡೆಯಿಲ್ಲದೆ ಫೋನುಗಳ ಸುರಿಮಳೆಯಾಗಿ, “ ‘ಕಸ್ತೂರಿ’ಯಲ್ಲಿ ಏನು ಬರೆದಿದ್ದೀಯಪ್ಪಾ!” ಎಂದು ಅಸಹಾಯಕತೆಯಿಂದ ನುಡಿದಿದ್ದರು.

‘ತಲೆ ತಗ್ಗಿಸಿ ನನ್ನನ್ನು ಓದು, ತಲೆ ಎತ್ತಿ ನಡೆಯುವಂತೆ ಮಾಡುತ್ತೇನೆ’ ಎನ್ನುವಂತಿರುವ ಈ ಪುಸ್ತಕದಲ್ಲಿ ಬದುಕಿನ ಎಲ್ಲ ಪ್ರಶ್ನೆಗಳಿಗೂ ಉತ್ತರ ಇದೆ. ಸಾಧನೆಯಿಂದ ಸಾಫಲ್ಯ ಸಾಧ್ಯ ಎನ್ನುವಂತಹ ಜೀವನಪಥ ಬದಲಾಯಿಸುವ ಅನೇಕ ವಿಚಾರಗಳಿದ್ದು, ಓದುಗನಿಗೆ ತಾನು ಹೇಗೆ ಬದುಕುವುದು ಸರಿ ಎಂಬ

ಕಲ್ಪನೆಯನ್ನು ಮೂಡಿಸುತ್ತದೆ. ೯ ಭಾಷೆಗಳಿಗೆ ಅನುವಾದಿತವಾಗಿರುವ ಈ ಪುಸ್ತಕ ಕನ್ನಡ ಪುಸ್ತಕ ಪ್ರಕಟನೆಯಲ್ಲಿ ವಿಕ್ರಮ ಸ್ಥಾಪಿಸಿದ್ದು, ಈವರೆಗೆ ಒಟ್ಟು ಮೂರೂವರೆ ಲಕ್ಷ ಪ್ರತಿಗಳು ಮಾರಾಟವಾಗಿದೆ; ಸಾವಿರಾರು ಜನಗಳನ್ನು ಸನ್ಮಾರ್ಗಕ್ಕೆ ಪ್ರೇರಿಸುತ್ತಿದೆ. ಈ ಪುಸ್ತಕ ಓದಿದ ಪಿಯುಸಿ ಹುಡುಗನೊಬ್ಬ ಈ ಪುಸ್ತಕದ ಬಗ್ಗೆಯೇ ಮೂವತ್ತು ಸಾವಿರಕ್ಕೂ ಮೀರಿ ಭಾಷಣ ಮಾಡುತ್ತ, ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡ. ಇವರೇ ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಮುಖ್ಯಸ್ಥರಾದ, ಸ್ವಾಮಿ ವೀರೇಶಾನಂದರಾಗಿ ಪ್ರಸಿದ್ಧರಾದುದು ಒಂದು ಜ್ವಲಂತ ಉದಾಹರಣೆ. ಇದನ್ನು ಓದಿ, ಆತ್ಮಹತ್ಯೆಯ ಯೋಚನೆ ಬಿಟ್ಟು ನೆಮ್ಮದಿ ಕಂಡವರು, ಪ್ರೇರಣೆ ಹೊಂದಿ, ಚೆನ್ನಾಗಿ ಓದಿ, ಐಎಎಸ್, ಐಪಿಎಸ್ ಇತ್ಯಾದಿ ಆದವರು ಹಲವರು. ಶ್ರೀ ರಾಮಕೃಷ್ಣ ಆಶ್ರಮದ ಪ್ರಕಟನೆಯಾಗಿ ಹೊರಬಂದ ೩೦ನೇ ವರ್ಷಾಚರಣೆಯನ್ನು ಬೆಂಗಳೂರು, ಮೈಸೂರು ಮೊದಲಾದೆಡೆ ಉತ್ಸವವಾಗಿ ಸಂಭ್ರಮಿಸಲಾಯಿತು. ಓದಿ, ತಮ್ಮ ಜೀವನದಲ್ಲಿ ಇಲ್ಲಿಯ ವಿಚಾರಗಳನ್ನು ಅಳವಡಿಸಿಕೊಂಡ ಹಲವು ಪ್ರಸಿದ್ಧರು ಈ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ಹೇಳಿಕೊಂಡರು.

'ಬದುಕಲು ಕಲಿಯಿರಿ' ಪರಿವಿಡಿಯೇ ಆಸಕ್ತಿಕರವಾಗಿದೆ. ಉಪಶೀರ್ಷಿಕೆಗಳನ್ನು ಪುಟಸಂಖ್ಯೆಯೊಡನೆ ನೀಡಲಾಗಿದೆ. ಹೀಗಾಗಿ, ಪುಸ್ತಕದ ಕೊನೆಯಲ್ಲಿ ಸೂಚಿಯ (ಇಂಡೆಕ್ಸ್) ಅಗತ್ಯವಿಲ್ಲ. ಒಮ್ಮೆ ಪರಿವಿಡಿಯ ಪುಟಗಳ ಮೇಲೆ ಕಣ್ಣಾಡಿಸಿದರೆ ಓದಿದುದೆಲ್ಲವೂ ನೆನಪಿಗೆ ಬರುತ್ತದೆ. ಮುನ್ನುಡಿಯಲ್ಲಿ ಸ್ವಾಮೀಜಿ ಪ್ರೇರಕ ಪ್ರಸಂಗಗಳ ಮೂಲಕ ವಿಚಾರ ತಿಳಿಸುವ ಪರಮಶಾಸ್ತ್ರಕ್ಕಿಂತ ಸರಿಯುದಾಹರಣೆ ಮಾರ್ಗವನ್ನು ಅನುಸರಿಸಿ, ಮನುಷ್ಯರ ಮನಸ್ಸನ್ನು ಎತ್ತರಕ್ಕೆ ಏರಿಸುವ ಕೆಲಸಕ್ಕೆ ಯತ್ನಿಸಿರುವುದನ್ನು ತಿಳಿಸಿದ್ದಾರೆ. ಪುಸ್ತಕದಿಂದ ಹೆಚ್ಚಿನದನ್ನು ಪಡೆಯಲು ಮತ್ತೆ ಮತ್ತೆ ಓದುವ ಆವಶ್ಯಕತೆ ಇದೆ ಎಂದಿದ್ದಾರೆ. ಪುಸ್ತಕ ರಚನೆಯ ಹಿನ್ನೆಲೆಯನ್ನು ನೀಡಿದ್ದಾರೆ. ಒಂದು ಪುಟ್ಟ ಅತ್ಯುತ್ತಮ ಸೂಕ್ತಿಯ ಉಲ್ಲೇಖದಿಂದ ಪ್ರತಿ ಅಧ್ಯಾಯವೂ ಪ್ರಾರಂಭವಾಗುತ್ತದೆ.

**'ಪ್ರಯತ್ನದಿಂದ ಪರಮಾರ್ಥ'** ಮೊದಲ ಅಧ್ಯಾಯ. ಮಹತ್ತನ್ನು ಸಾಧಿಸಿದವರೆಲ್ಲ ಶ್ರಮಪಟ್ಟು ದುಡಿಮೆಯಲ್ಲೆ ಮಗ್ನರು. ಅವರಿಗೆ ಕೆಲಸವೇ ಆನಂದ, ತೃಪ್ತಿಗಳನ್ನು ನೀಡಿ, ಅಪಾರ ಶಕ್ತಿ, ಆತ್ಮವಿಶ್ವಾಸ ತಂದಿತು. ೨೦೦೦ ಆವಿಷ್ಕಾರಗಳನ್ನು ಮಾಡಿದ ಎಡಿಸನ್ ಇವೆಲ್ಲ ಆಕಸ್ಮಿಕಗಳಲ್ಲ; ನಿರಂತರ ಶ್ರಮಕ್ಕೆ ಒಲಿದ ವರಗಳು. ಪ್ರತಿಭೆಯಲ್ಲಿ ಸ್ಫೂರ್ತಿಯ ಪಾಲು ಒಂದಾದರೆ, ಸತತ ಪರಿಶ್ರಮದ ಪಾಲು ೯೯ ಎಂದ. ಆದರ್ಶವೊಂದನ್ನು ಆಯ್ದು, ಅದನ್ನೇ ಬದುಕಿನ ಉಸಿರನ್ನಾಗಿಸಿ, ಅವಿರತ ಶ್ರಮದಿಂದ ಅದನ್ನು ಸಾಧಿಸಲು ಹೊರಟಾಗ ಮಾತ್ರ ಅಮೂಲ್ಯವಾದುದನ್ನು ಪಡೆಯಬಹುದು. ಗೆಲುವು ಶ್ರಮಕ್ಕೆ ಮೊದಲೇ ಬರುವುದು ಶಬ್ದಕೋಶದಲ್ಲಿ ಮಾತ್ರ. ಒಬ್ಬರಂತೆ ಒಬ್ಬರಿಲ್ಲ. ಅನುಕರಣೆ ಮಾಡಬೇಕಿಲ್ಲ. ಹಿಡಿದ ಕೆಲಸದಲ್ಲಿ ಸಫಲತೆ ಪಡೆದು, ಆನಂದದಿಂದ ಇದ್ದು, ದೈನ್ಯ, ಕೀಳರಿಮೆ ಅನಾಥಪ್ರಜ್ಞೆಯನ್ನು ಮೆಟ್ಟಿ ನಿಂತು ನಿಶ್ಚಿಂತೆ ನಿರ್ಭೀತಿಯಿಂದ ಬದುಕಿನ ದಾರಿಯಲ್ಲಿ ಧೈರ್ಯದಿಂದ ಮುನ್ನಡೆಯಬೇಕು.

**'ನಿಮ್ಮಲ್ಲಿದೆ ಅಪಾರ ಶಕ್ತಿ'** - ಎರಡನೆಯ ಅಧ್ಯಾಯ. ಬಯಸಿದ್ದನ್ನು ನೀಡುವ ಅದ್ಭುತ ರಹಸ್ಯ ಶಕ್ತಿಯನ್ನು ಮಾನವನ ಆಳ ಮನಸ್ಸಿನ ಪದರದೊಳಗೆ ದೇವತೆಗಳು ಬಚ್ಚಿಟ್ಟರಂತೆ. ಬಾಲ್ಯದಿಂದ ಹೊರಗೇ ಹರಿಯುವ ತನ್ನ ಮನಸ್ಸಿನಿಂದಾಗಿ ಅಂತಹ ಶಕ್ತಿ ತನ್ನಲ್ಲಿ ಇರಬಹುದೆಂದು ಯೋಚಿಸದೆ ಮಾನವ ಅದನ್ನು ಹೊರಗೇ ಹುಡುಕುತ್ತ ಹೋದ. ನಿನ್ನೊಳಗೆ ಹುಡುಕು ಎಂದು ಹೇಳಿದರೂ ನಂಬಲೊಲ್ಲ. ತನ್ನ ಬಗ್ಗೆ ತಾನೇ ಪರಿಮಿತ, ಸಂಕುಚಿತ ಭಾವನೆಯನ್ನು ಬೆಳೆಸಿಕೊಂಡು, ಅಜ್ಞಾನದಿಂದ ಬಂಧಿತನಾಗಿದ್ದಾನೆ. ತುಣುಕು ವಸ್ತುವಿನಲ್ಲಿ ಅಪಾರ ಶಕ್ತಿ ಇದೆ ಎಂದು ಐನ್‌ಸ್ಟೀನ್ ಹೇಳುವವರೆಗೆ ನಮಗೆ ತಿಳಿದಿರಲಿಲ್ಲ. ಸಹಸ್ರಾರು ವರ್ಷಗಳವರೆಗೆ ಭೂಮಿ ಚಪ್ಪಟೆಯಾಗಿದೆ ಎಂದೇ ಜನರು ತಿಳಿದಿದ್ದರು. ಜಗತ್ತಿನ ಅನುಭಾವಿಗಳು, ಸಂತರು ತಮ್ಮ ಅಲೌಕಿಕ ಅನುಭವಗಳಿಂದ ಅದ್ಭುತ ಸೂತ್ರವನ್ನು ಕಂಡುಕೊಂಡಿದ್ದರು. ಆಧುನಿಕ ವಿಜ್ಞಾನ ಅದನ್ನು ಪುಷ್ಟೀಕರಿಸಿತು. ನಿಮ್ಮ ಸುಪ್ತ ಮನಸ್ಸಿನಲ್ಲಿ ಅಪಾರ ಶಕ್ತಿ ಅಡಗಿದೆ ಎಂಬುದೇ ಅದು. ಇದನ್ನು ತಿಳಿದವನು ತನ್ನ ವ್ಯಕ್ತಿ ಜೀವನದಲ್ಲೂ, ಸಾಮಾಜಿಕ ಜೀವನದಲ್ಲೂ ಕ್ರಾಂತಿಕಾರಿ ಬದಲಾವಣೆ ತಂದುಕೊಳ್ಳಬಲ್ಲ. ನಮ್ಮ ವ್ಯಕ್ತಿತ್ವದ ನಿಗೂಢ ರಹಸ್ಯಗಳನ್ನು ಬಿಡಿಸಿ, ಬದುಕಿನ ಅರ್ಥ-ಉದ್ದೇಶಗಳನ್ನು ತಿಳಿಸಿಕೊಡುವ ಸೂತ್ರ ಇದು.

**'ಚಿಂತೆಯ ಚಿತೆಯಿಂದ ಪಾರಾಗಿ'** - ಮೂರನೆಯ ಅಧ್ಯಾಯ. ಒಬ್ಬನಿಗೆ ಇದ್ದಕ್ಕಿದ್ದಂತೆ ತಲೆತಿರುಗು, ವಾಂತಿ ಪ್ರಾರಂಭವಾಯಿತು. ಇದು ವೈದ್ಯರಿಗೆ ಸವಾಲಾಯಿತು. ಈ ಅಚ್ಚರಿಗೆ ಕಾರಣ ಚಿಂಕ್ರೋಭ (ಚಿಂತಾ-ಕ್ರೋಧ-ಭಯ). ಗೆಳೆಯ ಅಪಘಾತವಾಗಿ ಆಸ್ಪತ್ರೆ ಸೇರಿದ್ದ. ಈತ ಅವನ ದೊಡ್ಡ ಸಾಲಕ್ಕೆ ಜಾಮೀನು ನೀಡಿದ್ದ. ಗೆಳೆಯ ಸತ್ತರೆ ತನ್ನ ಗತಿ? ಎಂಬ ಚಿಂತೆ ಬೇನೆಗೆ ಕಾರಣವಾಗಿತ್ತು. ಗೆಳೆಯ ಗುಣಹೊಂದಿ ಮನೆಗೆ ಹೋದೊಡನೆ ಈತನ ಬೇನೆ ಮಾಯ! ಚಿಂಕ್ರೋಭಗಳು ನಮ್ಮ ದೇಹದಲ್ಲಿ ಮಾರಕ ರಾಸಾಯನಿಕ ಬದಲಾವಣೆಗಳನ್ನು ಉಂಟುಮಾಡಿ ಕಾಯಿಲೆಗಳನ್ನು ತರುತ್ತವೆ! ಎಷ್ಟೋ ಮಂದಿ ಸಿಟ್ಟಿನಿಂದ ಮಾಡಬಾರದ್ದು ಮಾಡಿ, ಆಗಬಾರದ್ದು ಆಗಿ ನೋವುಣ್ಣುತ್ತಾರೆ. ಆಪ್ತರ ಸಾವಿನ ದುಃಖದಿಂದ ಜೀವನದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಸಮಸ್ಯೆ ಎದುರಿಸುವಾಗ ಬುದ್ಧನ ಸೂಕ್ತಿ ಉಪಯುಕ್ತ: ಪ್ರೀತಿಪಾತ್ರರು ಅಗಲುತ್ತಾರೆ; ತಪ್ಪಿಸಿಕೊಳ್ಳುವಂತಿಲ್ಲ. ನನ್ನ ಬದುಕನ್ನು ರೂಪಿಸುವುದು ನನ್ನ ಯೋಚನೆ ಮತ್ತು ಭಾವನೆಗಳು; ಒಳಿತೋ ಕೆಡುಕೋ - ಮಾಡಿದಂಥ ಕಾರ್ಯಗಳು. ಅವುಗಳ ಫಲವನ್ನು ಉಣ್ಣುವವನು ನಾನೇ.

**'ಪ್ರೀತಿಯ ಪ್ರಚಂಡ ಶಕ್ತಿ'** – ನಾಲ್ಕನೆಯ ಅಧ್ಯಾಯ. ಸಮಾಜಶಾಸ್ತ್ರ ವಿದ್ಯಾರ್ಥಿಗಳ ಅಧ್ಯಯನದ ತಂಡವೊಂದು ಅಮೆರಿಕಾದ ಬಾಲ್ಟಿಮೋರ್‌ನ ಕೊಳಚೆ ಪ್ರದೇಶದ ಶಾಲೆಯ ಎಳೆಯರ ಹಿನ್ನೆಲೆಗಳನ್ನು ಕಲೆಹಾಕಿ, ಇವರಲ್ಲಿ ನೂರಕ್ಕೆ ೯೦ ಮಂದಿ ಮುಂದೆ ದುಷ್ಟರಾಗಿ ಜೈಲು ಸೇರುತ್ತಾರೆಂದು ತಮ್ಮ ವರದಿಯಲ್ಲಿ ಹೇಳಿದ್ದರು. ೨೫ ವರ್ಷಗಳ ಅನಂತರ ಈ ಭವಿಷ್ಯ ನಿಜವಾಯಿತೇ ಎಂದು ತಿಳಿಯಲು ಅದೇ ಪ್ರಾಧ್ಯಾಪಕರು ಇನ್ನೊಂದು ಅಧ್ಯಯನ ತಂಡವನ್ನು ಕಳಿಸಿದರು. ಹುಡುಕಿದಾಗ ಅವರಿಗೆ ೧೯೦ ವಿದ್ಯಾರ್ಥಿಗಳ ಮಾಹಿತಿ ಸಿಕ್ಕಿತು. ಅವರೆಲ್ಲ ಸಭ್ಯರಾಗಿ ಜೀವನ ನಡೆಸುತ್ತಿದ್ದರು. ಹಿಂದಿನ ತಂಡದ ಭವಿಷ್ಯವಾಣಿ ಸುಳ್ಳಾಗಲು ಕಾರಣ ಹುಡುಕಿದಾಗ ಅವರೆಲ್ಲ ಶೀಲಾ ರೂರ್ಕೆ ಎಂಬ ಅಧ್ಯಾಪಕಿಯಿಂದ ಪ್ರಭಾವಿತರಾದರೆಂದು ತಿಳಿಯಿತು. ನಿವೃತ್ತಳಾಗಿದ್ದ ಆಕೆಯನ್ನು ಭೇಟಿಮಾಡಿ, ಆ ಕೊಳಚೆ ಮಕ್ಕಳಲ್ಲಿ ನೀವು ಹೇಗೆ ಸ್ಫೂರ್ತಿಯನ್ನು ತುಂಬಿದಿರಿ ಎಂದು ಕೇಳಿದಾಗ, ಆಕೆ ಅದೇನೋ ನನಗೆ ತಿಳಿದಿಲ್ಲ , ನಾನು ಅಧ್ಯಾಪಕಿಯಾಗಿದ್ದಷ್ಟು ಕಾಲ ಎಲ್ಲ ಮಕ್ಕಳನ್ನೂ ಪ್ರೀತಿಯಿಂದ ನೋಡಿಕೊಂಡಿದ್ದೆ ಎಂದಳು. ಇಲ್ಲೇ ಅಸಾಮಾನ್ಯತೆ ಇರುವುದು. ಪ್ರೀತಿಸುವ ವ್ಯಕ್ತಿಯಿಂದ ಪ್ರೀತಿಸಲ್ಪಡುವವ ಆತ್ಮಶ್ರದ್ಧೆಯನ್ನು ಪಡೆದು, ತನ್ನತನವನ್ನು ಕಂಡುಕೊಂಡು, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾನೆ. ತಾಯ ಪ್ರೀತಿಯ ಶ್ರದ್ಧೆ ಪ್ರೋತ್ಸಾಹಗಳಿಂದ ಮಗು ಬೆಳೆಯುತ್ತದೆ. ಅಮ್ಮನ ಇಂತಹ ತ್ಯಾಗ ಮತ್ತು ಸೇವೆ ಇತರರಿಗೆ ಅತಿ ಎನ್ನಿಸಬಹುದು. ಆದರೆ ಪ್ರೀತಿಸುವವರಿಗೆ ಏನು ಮಾಡಿದರೂ ಕಡಿಮೆಯೇ ಎಂದು ತೋರುವುದು. ಶೀಲಾ ರೂರ್ಕೆಯ ಪರಿಶುದ್ಧ ಪ್ರೀತಿಯ ಶಕ್ತಿ ಆ ಸೌಲಭ್ಯ ವಂಚಿತ ಮಕ್ಕಳು ಮುಂದೆ ಸ್ವಾಭಿಮಾನಿ, ಸಭ್ಯ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿತು. ಇದನ್ನು ಓದುವವರಿಗೂ ತಮ್ಮಿಂದ ಹಾಗೆ ಪ್ರೀತಿಸಲು ಸಾಧ್ಯ ಎನ್ನಿಸುತ್ತದೆ.

**'ಅದ್ಭುತ ಘಟನೆಗಳು ಸಾರುವ ಸತ್ಯ'** – ಐದನೆಯ ಅಧ್ಯಾಯ. ಸಾವಿನ ಆಚೆಗೆ ಏನು? ಸಾಯುವುದು ದುಃಖಕರವೆ? ಎಂಬುದು ಅನಾದಿಕಾಲದಿಂದಲೂ ಮಾನವನನ್ನು ಕಾಡುವ ಪ್ರಶ್ನೆ. ಭಾರತೀಯರು ದೇಹಧಾರಿ ಜೀವಾತ್ಮನಿಗೆ ಸಾವಿಲ್ಲ , ಕರ್ಮದಿಂದ ಲಭಿಸುವ ಪುನರ್ಜನ್ಮದಿಂದ ಆತ ಬೇರೆ ದೇಹ ಪಡೆಯುತ್ತಾನೆ ಎಂದು ನಂಬುತ್ತಾರೆ. ಕರ್ಮ ಪುನರ್ಜನ್ಮಗಳನ್ನು ಒಪ್ಪದ ಇತರ ಮತಗಳು ಮರಣಾನಂತರ ಜೀವಾತ್ಮನು ಸ್ವರ್ಗ ನರಕಗಳಿಗೆ ಹೋಗುತ್ತಾನೆ ಎನ್ನುತ್ತಾರೆ. ಸ್ವಾಮೀಜಿ ಈ ಅಧ್ಯಾಯದಲ್ಲಿ ಮರಣಾನಂತರದ ಜೀವನ, ಪುನರ್ಜನ್ಮಗಳ ಬಗ್ಗೆ ಇರುವ ಸತ್ಯ ಘಟನೆಗಳ ದಾಖಲೆಗಳನ್ನು ಚರ್ಚಿಸಿ, ವಿಕಾಸವಾದಕ್ಕೆ ಹತ್ತಿರವಾಗಿರುವ ಕರ್ಮ ಪುನರ್ಜನ್ಮಗಳು ಸಾರ್ವತ್ರಿಕ–ಸಾರ್ವಕಾಲಿಕ ಸೂಕ್ಷ್ಮ ನಿಯಮ ಎಂದು ವಿವರಿಸಿ, ಈ ತಿಳಿವಳಿಕೆಯಿಂದ ಮಾನವ–ಮಾನವರ ನಡುವೆ ನಿಜವಾದ ಸೌಹಾರ್ದ ಮೂಡಬಹುದು ಎನ್ನುತ್ತಾರೆ. ಸಾಮಾನ್ಯ ರೈತ ಜಿ. ಅರ್ಹಿಗೋನಲ್ಲಿ ಆವಾಹನೆಯಾಗುತ್ತಿದ್ದ ಡಾ. ಫ್ರಿಟ್ಸ್ ಪವಾಡಸದೃಶವಾಗಿ ಶಸ್ತ್ರಚಿಕಿತ್ಸೆ ಮಾಡಿ, ವೈದ್ಯರಿಂದ ವಾಸಿಮಾಡಲಾಗದ ರೋಗಗಳನ್ನು ಗುಣಪಡಿಸುತ್ತಿದ್ದ. ಕರ್ಮ ಸಿದ್ಧಾಂತದ ಅರಿವು ಬೆಳೆದಲ್ಲಿ ಪಾಶ್ಚಾತ್ಯರ ಅತಿವಿಷಯಾಸಕ್ತಿ, ಲಂಪಟತೆ ಹೋಗಿ, ಸಂಯಮ, ಸ್ವನಿಯಂತ್ರಣ ಶಕ್ತಿ ಮೂಡಿ, ಅವರ ಸಂಸ್ಕೃತಿ, ಸಮಾಜ ಉಳಿದೀತು ಎನ್ನುವುದು ಪಾಲ್ ಬ್ರಂಟನ್ನರ ಅನಿಸಿಕೆ.

**'ಬಿತ್ತಿದಂತೆ ಬೆಳೆ ಸುಳ್ಳಲ್ಲ'** –ಆರನೆಯ ಅಧ್ಯಾಯ. ಸುಪ್ತಾವಾಹನೆಯಲ್ಲಿ ಅತೀಂದ್ರಿಯ ಶಕ್ತಿಯಿಂದ ಬಹುದೂರದಲ್ಲಿರುವ ರೋಗಿಯನ್ನು ಗಮನಿಸಿ, ಸರಿಯಾಗಿ ರೋಗನಿದಾನ ಮಾಡಿ, ವಿಶಿಷ್ಟ ಔಷಧಿಗಳನ್ನೂ ವಿಧಿಸಿ, ರೋಗ ವಾಸಿಮಾಡುತ್ತಿದ್ದ ಸಾಮಾನ್ಯ ರೈತ ಎಡ್ಗರ್ ಕೇಸಿ. ರೋಗದ ಕಾರಣ ಕೇಳುವಾಗ ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪಕೃತ್ಯಗಳ ಫಲವಾಗಿ ಈ ರೋಗ ಎನ್ನುತ್ತಿದ್ದ. ಇದನ್ನು ಗಮನಿಸಿದ ಆರ್ಥರ್ ಲ್ಯಾಮರ್ಸ್ ಸುಪ್ತಾವಸ್ಥೆಯಲ್ಲಿರುವ ಆತನಿಗೆ ಬದುಕಿನ ಅರ್ಥ, ಸುಖ–ದುಃಖ, ಸಾವಿನ ನಂತರ ಬದುಕಿದೆಯೆ ಅಥವಾ ಸರ್ವನಾಶವೆ, ಅಮರತ್ವ ಕನಸೆ ಇತ್ಯಾದಿ ಪ್ರಶ್ನೆಗಳನ್ನು ಕೇಳಲಾರಂಭಿಸಿದ. ಅಚಾನಕ್ಕಾಗಿ ಕೇಸಿ ಅವನಿಗೆ ನೀನೊಮ್ಮೆ ಸಂನ್ಯಾಸಿಯಾಗಿದ್ದೆ ಎಂದಾಗ ಪುನರ್ಜನ್ಮ ಸತ್ಯವೆಂದು ಸಾಧಿಸುವುದಾದರೆ ದರ್ಶನ–ಧರ್ಮ–ಮನೋವಿಜ್ಞಾನಗಳ ರೂಪವೇ ಬದಲಾಗುವುದೆಂದು ಊಹಿಸಿದ ಲ್ಯಾಮರ್ಸ್ ಆ ಬಗ್ಗೆ ಕೇಳಲು ಆರಂಭಿಸಿದ. ಕೇಸಿಯು ವ್ಯಕ್ತಿಗಳ ಅನೇಕ ಪುನರ್ಜನ್ಮಗಳ ಬಗ್ಗೆ ತಿಳಿಸಿದ್ದಲ್ಲದೆ, ಪುನರ್ಜನ್ಮವೆಂದರೆ ವಿಕಾಸ ಎಂದ. ಪ್ರಳಯಕ್ಕೆ ಹಿಂದೆ ಇದ್ದ ಅಟ್ಲಾಂಟಿಸ್, ಅಲ್ಲಿನ ಜನಗಳು ಸಾಧಿಸಿದ್ದ ಈಗಿಗಿಂತಲೂ ಬಹಳ ಮುಂದಿದ್ದ ವಿಜ್ಞಾನ, ಆಕಾಶದ ದಾಖಲೆಗಳನ್ನು ಅನುಸರಿಸಿ ತಾನು ಹೇಳುತ್ತಿರುವುದು, ಕಾರ್ಯ–ಕಾರಣ ಸಂಬಂಧ, ಬೂಮರಾಂಗ್ ಕರ್ಮದ ನೆಲೆ ಬೆಲೆ, ನಿದರ್ಶನಗಳು, ಪೂರ್ವ ನಿರ್ಧಾರಿತ ಉದ್ಯೋಗ ಸಂಸಾರಗಳು, ಸಂತಾನ, ನೂತನ ದೃಷ್ಟಿಕೋನ–ಇವೆಲ್ಲವನ್ನೂ ಅವನು ತಿಳಿಸಿದ. ಜನ್ಮಾಂತರ ಮತ್ತು ಕರ್ಮದ ಬಗ್ಗೆ ಅನುಮಾನಿಕ ಸಾಕ್ಷ್ಯಾಧಾರಗಳನ್ನು ನೀಡಿ, ಮನೋವಿಜ್ಞಾನ ದೂರದರ್ಶನ ಇತ್ಯಾದಿಗಳ ಬಗ್ಗೆ ಕೆಲವೇ ವರ್ಷಗಳಲ್ಲಿ ನಿಖರ ಜ್ಞಾನ ಲಭ್ಯವಾಗುವುದೆಂದ.

**'ಪ್ರಾರ್ಥನೆಯಿಂದ ಪರಿವರ್ತನೆ'** –ಏಳನೆಯ ಅಧ್ಯಾಯ. ದೇವರೊಡನೆ ನಡೆಸುವ ಪವಿತ್ರ ಸಂಭಾಷಣೆಯೆ ಪ್ರಾರ್ಥನೆ. ಮನಃಸ್ವಾಸ್ಥ್ಯ, ನೆಮ್ಮದಿಗಳು ಅವನ ಕೃಪೆಗೆ ನೇರ ಅನುಗುಣವಾಗಿರುವುದು. ದೇವರಿಗೆ ತನ್ನನ್ನು ಸಮರ್ಪಿಸಿಕೊಂಡವನಿಗೆ ಆನಂದದ ನಿತ್ಯೋತ್ಸವ. ವ್ಯಾಕುಲತೆಯೆ ಜೀವಾಳವಾದ ಪ್ರಾರ್ಥನೆ ಅಂತಃಶಕ್ತಿಯನ್ನು ಹೆಚ್ಚಿಸಿ, ಪರಿವರ್ತನೆ ತರಬಲ್ಲುದು. ಈ ಬಗ್ಗೆ ಪವಾಡಸದೃಶವಾದ ಅನೇಕ ಸತ್ಯಘಟನೆಗಳನ್ನು ಇಲ್ಲಿ ಉದಾಹರಿಸಿದ್ದಾರೆ. ಕಾಮವನ್ನು ಗೆಲ್ಲಲು, ಮನೋಚಾಂಚಲ್ಯವನ್ನು

ನಿಗ್ರಹಿಸಲು ಹರಿನಾಮಸ್ಮರಣೆ, ಪ್ರಾರ್ಥನೆಯೆ ದಾರಿ ಎಂದರು ಶ್ರೀರಾಮಕೃಷ್ಣ ಪರಮಹಂಸರು. ನಮ್ಮ ಪ್ರಯತ್ನದ ಜೊತೆ ಪ್ರಾರ್ಥನೆಯೂ ಸೇರಿದಲ್ಲಿ ಬೇಗನೆ ಫಲ ದೊರೆಯುವುದು. ನಿರಂತರ, ದೀರ್ಘ ಪ್ರಾರ್ಥನೆಯೊಂದರಿಂದಲೇ ಆನಂದಭರಿತ ಅಪೂರ್ವ ಆಂತರಿಕ ಶಾಂತಿಯನ್ನು ಪಡೆದವನು ಬ್ರದರ್ ಲಾರೆನ್ಸ್. ಕ್ರಮೇಣ ನಾನು, ನನ್ನದು ಎಂಬ ಭಾವವು ಪ್ರಾರ್ಥನೆಯಲ್ಲಿ ಕರಗಿಹೋಗಿ, ಅಧ್ಯಾತ್ಮರಾಜ್ಯದಲ್ಲಿ ಮುನ್ನಡೆ ಸಾಧ್ಯವಾಗುತ್ತದೆ.

**'ದೇವರಿರುವನೆ?'**–ಎಂಟನೆಯ ಅಧ್ಯಾಯ. ಧರ್ಮಗಳು ದ್ವೇಷ, ಮತಾಂಧತೆಗೆ ಎಡೆ ನೀಡಿ, ಮನುಷ್ಯನನ್ನು ನರಕಕ್ಕೆ ತಳ್ಳಲು ಹುಟ್ಟಿವೆಯೇನೋ, ಇವು ಮಾದಕ ದ್ರವ್ಯಗಳೇನೊ ಎಂಬ ಪ್ರಶ್ನೆಗಳಿಂದ ಮೊದಲು ಮಾಡಿ, ವಿಸ್ಮಯ ಸೃಷ್ಟಿಯ ಹಿಂದೆ ಸರ್ವಶಕ್ತನಾದ ದೇವರಿರುವನು ಎಂಬುದನ್ನು ವಿಜ್ಞಾನವೂ ಸಾರುತ್ತಿದೆ ಎಂದು ಹೇಳಿದ್ದಾರೆ. ನ್ಯೂಯಾರ್ಕ್ ಅಕಾಡೆಮಿ ಆಫ್ ಸೈನ್ಸಸ್ ಅಧ್ಯಕ್ಷರಾದ ವಿಜ್ಞಾನಿ ಎ. ಕ್ರೆಸ್ಸಿಯವರು ಬರೆದು, ರೀಡರ್ಸ್ ಡೈಜೆಸ್ಟ್ ಪ್ರಕಟಿಸಿದ 'ವ್ಯಕ್ತಿಯು ದೇವರಲ್ಲಿ ಏಕೆ ವಿಶ್ವಾಸವನ್ನು ಇಡುತ್ತಾನೆಂಬುದಕ್ಕೆ ಏಳು ಕಾರಣಗಳು' ಲೇಖನವನ್ನು ವಿಶ್ಲೇಷಿಸಿದ್ದಾರೆ.

ಮೊದಲಿನ ನಾಲ್ಕು ಅಧ್ಯಾಯಗಳು ೩೬೫ ಪುಟಗಳನ್ನು ಹೊಂದಿದ್ದರೆ, ಕೊನೆಯ ನಾಲ್ಕು ಅಧ್ಯಾಯಗಳು ಕೇವಲ ೧೧೪ ಪುಟಗಳನ್ನು ಹೊಂದಿವೆ. ತರ್ಕಕ್ಕೆ ಹೆಚ್ಚು ಬೆಲೆ ನೀಡುವ ಆಧುನಿಕ ಜಗತ್ತಿನ ಯುವಕರು ನಂಬಿಕೆ ಪ್ರಧಾನವಾಗಿ ಇರುವ ಸಾವಿನ ನಂತರದ ಪುನರ್ಜನ್ಮ, ಕರ್ಮದ ಸತ್ಯತೆ ಸ್ಥಾಪಿಸಿದ ಕೇಸಿ, ಪ್ರಾರ್ಥನೆ, ದೇವರು ಇವುಗಳನ್ನು ಆಸಡ್ಡೆಯಿಂದ ಕಾಣುವರು ಎಂದು ತಿಳಿದ ಲೇಖಕರು ಇವನ್ನು ಕುಗ್ಗಿಸಿದ್ದಾರೆಯೆ? ದೇವರ ಬಗೆಗಿನ ಕೊನೆಯ ಅಧ್ಯಾಯವಂತೂ ಕೇವಲ ೯ ಪುಟಗಳಲ್ಲಿದೆ. ಈ ನಾಲ್ಕು ಅಧ್ಯಾಯಗಳಲ್ಲೂ ನೀಡಿರುವ ಉಲ್ಲೇಖಗಳ ಬಹುಪಾಲು ಲೇಖಕರು ಪಾಶ್ಚಾತ್ಯರು. ಕರ್ಮ, ಪುನರ್ಜನ್ಮಗಳ ಬಗ್ಗೆ, ದೇವರು ಪ್ರಾರ್ಥನೆಗಳ ಬಗ್ಗೆ ಪಾಶ್ಚಾತ್ಯರೇ ಸಂಶೋಧಿಸಿ, ಒಪ್ಪಿಕೊಂಡಿದ್ದಾರೆಂದು ತಿಳಿದಾಗ, ನಮ್ಮ ತರುಣರೂ ಒಪ್ಪಿಯಾರು ಎಂಬುದು ಲೇಖಕರ ಅನಿಸಿಕೆ ಇದ್ದೀತು.

ವಿದ್ಯಾಶಾಲೆಯಲ್ಲಿ, ಟ್ರೇನಿಂಗ್ ಸೆಂಟರ್‌ನಲ್ಲಿ, ಎಳೆಯ ತರುಣರೊಡನೆ ತಮ್ಮ ಸೇವೆಯ ಬಹುಭಾಗ ಕಾಲವನ್ನು ಕಳೆದ ಸ್ವಾಮಿ ಜಗದಾತ್ಮಾನಂದಜಿ ಯುವಜನರ ನಾಡಿ ಮಿಡಿತವನ್ನು ಬಲ್ಲರು. ಒಂದು ಪೀಳಿಗೆಯ ತರುಣರನ್ನು ಪ್ರೇರಿಸಿದ ಪುಸ್ತಕವಿದು ಎನ್ನುವ ಹೊಗಳಿಕೆಗೆ ಕಾರಣ, 'ಬದುಕಲು ಕಲಿಯಿರಿ' ಪುಸ್ತಕದ ಅಂತಸ್ಸತ್ವ, ವಿಚಾರಗಳ ಮಹತ್ವ. ✽


*With Best Compliments From :*

GAVIRANGA ENTERPRISES
ELECTRONICS DIVISION

**C-9 & M-4, INDUSTRIAL ESTATE**
**B.H.ROAD, TUMKUR - 572 103, INDIA.**
**Mob: 9844099015**
**E-Mail : jayasimha@gaviranga.com**

***Advantage To World-Class Magnetics***